**ದಿನಾಂಕಃ 03.11.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ – ವಾದಿ ಪರ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

ದಿನಾಂಕಃ 12.10.2022 ರಂದು ಆಗಿರುವ ಕ್ರಯದ ಕರಾರು ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿರುವ ವಾದಿಯ ಸಹಿಯನ್ನು ನಿಪಿ-1(ಎ) ಮತ್ತು ನಿಪಿ-1(ಬಿ) ಎಂದು, ನಿಪಿ-1ಕ್ಕೆ 1, 2 ಮತ್ತು 4ನೇ ಪ್ರತಿವಾದಿಗಳು ಸಹಿ ಮಾಡಿರುತ್ತಾರೆ. ಪ್ರತಿವಾದಿಗಳ ಸಹಿಗಳನ್ನು ನಿಪಿ-1(ಸಿ) ರಿಂದ ನಿಪಿ-1(ಇ) ಎಂದು ಗುರುತಿಸಲಾಯಿತು. ನಿಪಿ-1ಕ್ಕೆ ಸಾಕ್ಷಿಯಾಗಿ ನಾಗೇಂದ್ರ ಮತ್ತು ಸುರೇಶ್ ರವರು ಸಹಿ ಮಾಡಿರುತ್ತಾರೆ. ಬಿಕ್ಲಂದಾರರಾಗಿ ಎಂ. ನಟರಾಜುರವರು ಸಹಿ ಮಾಡಿರುತ್ತಾರೆ. ದಿನಾಂಕಃ 11.02.2023 ರಂದು ಪ್ರತಿವಾದಿಗಳಿಗೆ ಕಳುಹಿಸಿದ ನೋಟಿಸಿನ ಕಛೇರಿ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-2 ಎಂದು, ಆ ಬಗ್ಗೆ ನಾಲ್ಕು ಅಂಚೆ ರಶೀದಿಗಳನ್ನು ನಿಪಿ-2(ಎ) ರಿಂದ ನಿಪಿ-2(ಡಿ) ಎಂದು, ಮೂರು ಅಂಚೆ ಸ್ವೀಕೃತಿಗಳನ್ನು ನಿಪಿ-3 ರಿಂದ ನಿಪಿ-5 ಎಂದು ಗುರುತಿಸಲಾಯಿತು. ಆಸ್ತಿ ತೆರಿಗೆ ರಿಜಿಸ್ಟರನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ನಮೂನೆ 3 ನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 7 ಮತ್ತು ನಿಪಿ-8 ಎಂದು ಗುರುತಿಸಲಾಯಿತು. ರಿಪ್ಲೆ ನೋಟಿಸನ್ನು ನಿಪಿ-9 ಎಂದು ಗುರುತಿಸಲಾಯಿತು. 17 ತೆರಿಗೆ ಪಾವತಿ ರಶೀದಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ-10 ನಿಪಿ-26 ಎಂದು ಗುರುತಿಸಲಾಯಿತು. ಎರಡು ಆಸ್ತಿ ತೆರಿಗೆ ಸ್ವಯಂ ನಿರ್ಧರಣಾ ನಮೂನೆಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-27 ಮತ್ತು ನಿಪಿ-28 ಎಂದು ಗುರುತಿಸಲಾಯಿತು. 1ನೇ ಪ್ರತಿವಾದಿಯ ಪತಿಯ ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-29 ಎಂದು ಗುರುತಿಸಲಾಯಿತು.

**ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ದಿನಾಂಕಃ 03.11.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – ಪ್ರತಿವಾದಿ ಪರ ವಕೀಲರಿಂದ**

ನಾನು ದಾಖಲಾತಿಗಳನ್ನು ನೋಡಿ ನನ್ನ ಪ್ರಮಾಣ ಪತ್ರವನ್ನು ತಯಾರು ಮಾಡಿಸಿರುತ್ತೇನೆ. 5 ಅಗ್ರಿಮೆಂಟ್ ಆಗಿರುತ್ತದೆ. ನಾನು ವಿದ್ಯಾಭ್ಯಾಸ ಮಾಡಿಲ್ಲ. ಸಹಿ ಮಾಡುವುದನ್ನು ಹೊರತು ಪಡಿಸಿ ನನಗೆ ಓದಲು ಬರೆಯಲು ಬರುವುದಿಲ್ಲ. ನಮ್ಮ ವಕೀಲರಿಗೆ ಮಾಹಿತಿ ಕೊಟ್ಟು ಪ್ರಮಾಣ ಪತ್ರ ಮಾಡಿಸಿರುತ್ತೇನೆ. ನಿಪಿ–1 ಆಗಸ್ಟ್ 2019 ರಂದು ಆಗಿರುತ್ತದೆ ದಿನಾಂಕ ನೆನಪಿಲ್ಲ. ಶಿವಮಲ್ಲಮ್ಮರವರು ವಾದಿಯ ತಾಯಿ ಇರುತ್ತಾರೆ. ಶಿವಮಲ್ಲಮ್ಮ ನಮ್ಮ ಊರಿನವರಿರುತ್ತಾರೆ. ಪ್ರಾಸಾ 2 ರವರು ಏನು ಸಾಕ್ಷಿ ವಿಚಾರಣೆ ನೀಡಿರುತ್ತಾರೆಂದು ನಾನು ತಿಳಿದುಕೊಂಡಿರುತ್ತೇನೆ. ನಿಪಿ–1 ಆಗುವ ಪೂರ್ವದಲ್ಲಿ ವಾದಿ ಮತ್ತು ಪ್ರತಿವಾದಿಗಳ ನಡುವೆ ಯಾವುದೇ ಮಾತುಕತೆಯಾಗಿರುವುದಿಲ್ಲ. ದಾವಾ ಆಸ್ತಿಯ ಚೆಕ್ಕುಬಂದಿ ಹೇಳಬಹುದು. ಪೂರ್ವಕ್ಕೆ ರಸ್ತೆ ಬರುತ್ತದೆ. ಪಶ್ಚಿಮಕ್ಕೆ ಚೆನ್ನಬಸಪ್ಪನವರ ಜಮೀನು, ಉತ್ತರಕ್ಕೆ ರಾಜಶೇಖರವರ ಜಮೀನು, ದಕ್ಷಿಣಕ್ಕೆ ಏನು ಬರತ್ತದೆ ಎಂದು ನೆನಪಿರುವುದಿಲ್ಲ. ಚೆಕ್ಕುಬಂದಿಯನ್ನು ಯಾವ ದಾಖಲಾತಿ ಮೇರೆ ಬರೆಸಿದ್ದಾರೆಂದು ಗೊತ್ತಿರುವುದಿಲ್ಲ. ಒಂದು ಎಕರೆಯಲ್ಲಿ 0.26 ಸೆಂಟಿಗೆ ಅಗ್ರಿಮೆಂಟ್ ಆಗಿರುತ್ತದೆ. ಅಗ್ರಿಮೆಂಟ್ ಆಗುವ ಪೂರ್ವದಲ್ಲಿ ಜಾಗದ ಅಳತೆ ಮಾಡಿಸಿರುತ್ತಾರೆ. ಆ ಬಗ್ಗೆ ದಾಖಲಾತಿ ನೋಡಿರುತ್ತೇನೆ. ಈ ಕೇಸಿನಲ್ಲಿ ವಾದಿಯು ಅಗ್ರಿಮೆಂಟ್ ಮಾತ್ರ ಕೊಟ್ಟಿರುತ್ತಾರೆ ಬೇರೆ ದಾಖಲಾತಿ ಕೊಟ್ಟಿರುವುದಿಲ್ಲ 0.26 ಸೆಂಟಿನ ಅಕ್ಕಪಕ್ಕ ಸೈಟುಗಳಿವೆ ಎಂದರೆ ಸರಿ. ದಾವಾ ಸ್ವತ್ತಿನ ಅಡಿ ಲೆಕ್ಕದಲ್ಲಿ ನಿಪಿ–1 ರಲ್ಲಿ ಬರೆಸಿರುವುದಿಲ್ಲ. 0.26 ಸೆಂಟ್ ಸೈಟ್ ಲೆಕ್ಕದಲ್ಲಿ ದಾಖಲಾತಿ ಆಗಿದೆ. ನನ್ನ ಸಮಕ್ಷಮ ವಾದಿ ಮತ್ತು ಪ್ರತಿವಾದಿಗಳ ನಡುವೆ ಯಾವುದೇ ಹಣಕಾಸಿನ ವ್ಯವಹಾರವಾಗಿಲ್ಲ ಎಂದರೆ ಸರಿಯಲ್ಲ.

ಒಂದು ಸೆಂಟ್ಸ್ ಗೆ 50 ಸಾವಿರದಂತೆ ಪ್ರತಿವಾದಿಗಳು ವಾದಿಗೆ ಮಾರಾಟ ಮಾಡಿರುತ್ತಾರೆ. ನಿಪಿ–1 ರಂತೆ ಕ್ರಯ ಪತ್ರ ಮಾಡಲು ಆರು ತಿಂಗಳ ಅವಧಿ ಪಡೆದುಕೊಂಡಿರುತ್ತಾರೆ. ನಿಪಿ–1 ಆದ ಎಷ್ಟು ತಿಂಗಳ ನಂತರ ನಿಪಿ–2 ಆಗಿದೆ ಎಂದು ನನಗೆ ಗೊತ್ತಿಲ್ಲ. ನಿಪಿ–1 ರಲ್ಲಿರುವ ಪ್ರಭುಸ್ವಾಮಿಯವರ ಸಹಿ ನಿಪಿ–2 ರಿಂದ ನಿಪಿ–5 ರಲ್ಲಿರುವ ಪ್ರಭುಸ್ವಾಮಿಯವರ ಸಹಿಗಳಿಗೆ ತಾಳೆಯಾಗುವುದಿಲ್ಲ ಎಂದರೆ ಸರಿಯಲ್ಲ. ನಿಪಿ–1ನ್ನು ವಾದಿಯವರು ಹೇಳಿ ಬರೆಸಿರುತ್ತಾರೆ. ದಾವಾ ಸ್ವತ್ತಿನ ಸರ್ವೆ ನಂ. 93/2 ಇರುತ್ತದೆ. ದಾವಾ ಸ್ವತ್ತು ಪ್ರತಿವಾದಿಗಳ ಹೆಸರಿಗೆ ಆರ್ ಟಿ ಸಿ ಬರುತ್ತಿರುತ್ತದೆ. ಮತ್ತು ರಾಜಶೇಖರರವರ ಹೆಸರಿಗೆ ಆರ್ ಟಿ ಸಿ ಬರುತ್ತಿರುವ ಬಗ್ಗೆ ನನಗೆ ಗೊತ್ತಿಲ್ಲ. ಸ್ಟಾಂಪ್ ಪೇಪರನ್ನು ವಾದಿ ತಂದಿರುತ್ತಾರೆ. ನನ್ನ ಊರು ಬಂಡಳ್ಳಿ . ಈ ದಾವಾ ಸ್ವತ್ತಿನ ಅಕ್ಕ ಪಕ್ಕ ನನಗೆ ಯಾವುದೇ ಆಸ್ತಿಗಳಿಲ್ಲ. ನಾನು ಈ ದಿನ ವಾದಿ

ಜೊತೆ ಸಾಕ್ಷಿ ಹೇಳಲು ಬಂದಿರುವುದಿಲ್ಲ. ನಾನು ಕಳೆದ ಬಾರಿ ನ್ಯಾಯಾಲಯಕ್ಕೆ ಬಂದ ಕಾರಣ ಈ ದಿನ ನ್ಯಾಯಾಲಯದಲ್ಲಿ ಕೇಸು ಇರುತ್ತದೆ ಎಂದು ಗೊತ್ತಾಗಿರುತ್ತದೆ.

ಆಗಸ್ಟ್ 2019 ಆದ ನಂತರ ವಾದಿ ಮತ್ತು ಪ್ರತಿವಾದಿಗಳ ನಡುವೆ ಯಾವುದೇ ಮಾತುಕತೆಯಾದ ಬಗ್ಗೆ ನನಗೆ ಹೇಳಿರುವುದಿಲ್ಲ. ನಿಪಿ–1 ರಿಂದ ನಿಪಿ–5ನ್ನು ನಟರಾಜುರವರ ಕಛೇರಿಯಲ್ಲಿ ಬರೆದಿರುತ್ತದೆ. ನಿಪಿ–1 ರಿಂದ 5ನ್ನು ಬರೆಯುವ ಪೂರ್ವದಲ್ಲಿ ಡ್ರಾಪ್ಟ್ ಕಾಪಿ ಮಾಡಿರುವುದಿಲ್ಲ. ನಟರಾಜುರವರ ಮುಂದೆ ಆಧಾರ್ ಕಾರ್ಡು ಕೊಟ್ಟಿರುತ್ತಾರೆ. ಬೇರೆ ದಾಖಲೆ ಕೊಟ್ಟಿರುವುದಿಲ್ಲ. ನನ್ನ ಮುಂದೆ ವಾದಿ ಮತ್ತು ಪ್ರತಿವಾದಿಗಳು ನಿಪಿ–1 ರಿಂದ ನಿಪಿ–5ಕ್ಕೆ ಸಹಿ ಮಾಡಿರುತ್ತಾರೆಂದು ನಾನು ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ವಕೀಲರ ಮೂಲಕ ಓದಿಸಿ ತಿಳಿದುಕೊಂಡಿದ್ದೇನೆಂದು ಬರೆಸಲು ತೊಂದರೆ ಇರುವುದಿಲ್ಲ. ಆರು ಆರು ತಿಂಗಳಿಗೆ ಒಂದೊಂದು ಅಗ್ರಿಮೆಂಟ್ ಮಾಡಿಸಿರುತ್ತಾರೆ ದಿನಾಂಕ, ತಿಂಗಳು ಮತ್ತು ಇಸವಿ ನೆನಪಿರುವುದಿಲ್ಲ.

ನಿಪಿ–2 ರ ಒಕ್ಕಣೆ ತಿಳಿದುಕೊಂಡಿದ್ದೇನೆ. ನಿಪಿ–2 ರಲ್ಲಿ ನಿಪಿ–1 ರ ಬಗ್ಗೆ ಒಕ್ಕಣೆ ಇಲ್ಲ ಎಂದರೆ ಸರಿ. ನಿಪಿ–3 ರ 2ನೇ ಪುಟದಲ್ಲಿ ನಾನು ಸಹಿ ಮಾಡುವಾಗ ಖಾಲಿ ಜಾಗ ಇತ್ತಾ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ನಾನು ನೋಡಿದ್ದೇನೆ. ಪ್ರತಿವಾದಿಗಳು ನನಗೆ ದಾವಾ ಸ್ವತ್ತನ್ನು ತೋರಿಸಿರುತ್ತಾರೆ. ನಿಪಿ–2 ರಿಂದ ನಿಪಿ–5 ರಲ್ಲಿ ನಿಪಿ–1 ರ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾಗರಾಜು ನಮ್ಮ ಗ್ರಾಮದವರು ಹಾಗಾಗಿ ಪರಿಚಯವಿರುತ್ತಾರೆ. ವಾದಿ ಕೇಳಿಕೊಂಡ ಮೇರೆಗೆ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಷ್ಟು ರೂ. ಸ್ಟಾಂಪ್ ಪೇಪರನ್ನು ಅಗ್ರಿಮೆಂಟ್ ಮಾಡಲು ತಂದಿರುತ್ತಾರೆಂದು ನನಗೆ ಗೊತ್ತಿಲ್ಲ. 12.00 ರಿಂದ 12.30 ರ ಸಮಯದಲ್ಲಿ ನಿಪಿ–1 ಆಗಿರುತ್ತದೆ. ಉಳಿದ ಅಗ್ರಿಮೆಂಟುಗಳು ಯಾವ ಅವಧಿಯಲ್ಲಾಯಿತೆಂದು ನನಗೆ ನೆನಪಿಲ್ಲ. ಒಂದು ಸೆಂಟಿಗೆ 50 ಸಾವಿರದಂತೆ ಕ್ರಯದ ಮಾತುಕತೆಯಾಗಿತ್ತು. 0.26 ಸೆಂಟಿನಲ್ಲಿ ಸೈಟುಗಳಾಗಿ ಮಾಡಿದರೆ ಎಷ್ಟು ಸೈಟುಗಳಾಗುತ್ತವೆ ಎಂದು ನನಗೆ ಹೇಳಲಾಗುವುದಿಲ್ಲ. 0.26 ಸೆಂಟ್ ವ್ಯವಸಾಯೇತರಕ್ಕೆ ವರ್ಗಾವಣೆಯಾದ ಬಗ್ಗೆ ನಾನು ದಾಖಲೆಯನ್ನು ನೋಡಿಲ್ಲ. ನಾನು ಮತ್ತು ವಾದಿಯವರು ಹತ್ತಿರದ ಸಂಬಂಧಿಕರಾದ ಕಾರಣ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿ ನನಗೆ ಅಕ್ಕನ ಮಗನಾಗಬೇಕು ಎಂದು ಹೇಳುವುದು ಸರಿಯಲ್ಲ. ದಾವಾ ಸ್ವತ್ತು ಬೇರೆ ಯಾರಿಗಾದರೂ ಸೇರಿರುತ್ತದೆಯೇ ಎಂದು ಪ್ರತಿವಾದಿಗಳನ್ನು ಕೇಳಿ ತಿಳಿದುಕೊಂಡಿರುವುದಿಲ್ಲ. ನಿಪಿ–1 ರಿಂದ ನಿಪಿ–5ನ್ನು ಪ್ರತಿವಾದಿಗಳು ಬರೆದುಕೊಟ್ಟಿಲ್ಲ ಅದನ್ನು ನಾನು ಮತ್ತು ವಾದಿ ಸೇರಿಕೊಂಡು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ದಿನಾಂಕಃ 03.11.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ – ವಾದಿ ಪರ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

ನಿಪಿ–1ಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ–1(ಸಿ) ಎಂದು ಗುರುತಿಸಲಾಯಿತು. ನಿಪಿ–2ಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು.

**ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ಓ.ಎಸ್. ನಂ. / 2021** **ಪಿ ಡಬ್ಲ್ಯೂ - 1**

**ದಿನಾಂಕಃ 03.11.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ – ವಾದಿ ಪರ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

ದಿನಾಂಕಃ ರ ನೋಂದಾಯಿತ ಕ್ರಯ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ- ಎಂದು ಗುರುತಿಸಲಾಯಿತು.

ದಿನಾಂಕಃ ರ ನೋಂದಾಯಿತ ಕ್ರಯ ಪತ್ರದ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ- ಎಂದು ಗುರುತಿಸಲಾಯಿತು.

ಯಥಾ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ- ಎಂದು ಗುರುತಿಸಲಾಯಿತು.

ಸರ್ವೆ ನಂ. ಕೈ ಬರಹದ ಪಹಣಿಯ ಯಥಾ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ- ಎಂದು ಗುರುತಿಸಲಾಯಿತು.

ಸರ್ವೆ ನಂ. ಗಣಕೀಕೃತ ಪಹಣಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ- ಎಂದು ಗುರುತಿಸಲಾಯಿತು.

ಒಂದು ಮ್ಯುಟೇಷನ್ ರಿಜಿಸ್ಟರ್ ಎಕ್ಸ್ಟ್ರಾಕ್ಟನ್ನು ಹಾಜರು ಪಡಿಸಿದ್ದು ಅದನ್ನು ನಿಪಿ- ಎಂದು ಗುರುತಿಸಲಾಯಿತು.

ಒಂದು ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ಟ್ರಾಕ್ಟನ್ನು ಹಾಜರು ಪಡಿಸಿದ್ದು ಅದನ್ನು ನಿಪಿ- ಎಂದು ಗುರುತಿಸಲಾಯಿತು.

ಒಂದು ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ- ಎಂದು ಗುರುತಿಸಲಾಯಿತು.

ಒಂದು ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ- ಎಂದು ಗುರುತಿಸಲಾಯಿತು.

ಒಂದು ಕಂದಾಯ ರಶೀದಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ- ಎಂದು ಗುರುತಿಸಲಾಯಿತು.

ಪ್ರತಿವಾದಿಗಳಿಗೆ ಕಳುಹಿಸಿದ ನೋಟಿಸು ಹಿಂದಿರುಗಿ ಬಂದ ಅಂಚೆ ಕವರನ್ನು ಹಾಜರು ಪಡಿಸಿದ್ದು ಅದನ್ನು ಈ ದಿನ ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಿ ಕವರನ್ನು ನಿಪಿ-4 ಎಂದು, ಅದರೊಳಗಿರುವ ನೋಟಿಸನ್ನು ನಿಪಿ-4(ಎ) ಎಂದು, ಎಂದು ಗುರುತಿಸಲಾಯಿತು.

ದಿನಾಂಕಃ 19.11.2021 ರಂದು ವಾದಿ ಮತ್ತು ಪ್ರತಿವಾದಿಗಳ ನಡುವೆ ಆದ ಸ್ವಾಧೀನ ರಹಿತ ನೋಂದಾಯಿತ ಕ್ರಯದ ಒಪ್ಪಂದದ ಕರಾರು ಪತ್ರದ ಮೂಲ ಪ್ರತಿಯನ್ನು ಅದನ್ನು ನಿಪಿ-1 ಎಂದು, ವಾದಿಯ ಸಹಿಯನ್ನು ನಿಪಿ-1(ಎ) ರಿಂದ ನಿಪಿ-1(ಸಿ) ಗುರುತಿಸಲಾಯಿತು. 1ನೇ ಪ್ರತಿವಾದಿಯ ಸಹಿಯನ್ನು ನಿಪಿ-1(ಡಿ) ರಿಂದ ನಿಪಿ-1(ಎಫ್) ಎಂದು ಗುರುತಿಸಲಾಯಿತು. 2ನೇ ಪ್ರತಿವಾದಿಯ ಸಹಿಯನ್ನು ನಿಪಿ-1(ಜಿ) ರಿಂದ ನಿಪಿ-1(ಐ) ಎಂದು ಗುರುತಿಸಲಾಯಿತು.

ದಿನಾಂಕಃ 11.02.2023 ರಂದು ಪ್ರತಿವಾದಿಗಳಿಗೆ ಕಳುಹಿಸಿದ ನೋಟಿಸಿನ ಕಛೇರಿ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-2 ಎಂದು, ಆ ಬಗ್ಗೆ ನಾಲ್ಕು ಅಂಚೆ ರಶೀದಿಗಳನ್ನು ನಿಪಿ-2(ಎ) ರಿಂದ ನಿಪಿ-2(ಡಿ) ಎಂದು, ಮೂರು ಅಂಚೆ ಸ್ವೀಕೃತಿಗಳನ್ನು ನಿಪಿ-3 ರಿಂದ ನಿಪಿ-5 ಎಂದು ಗುರುತಿಸಲಾಯಿತು.

ನಿಪಿ-1ಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-1(ಎಫ್) ಎಂದು ಗುರುತಿಸಲಾಯಿತು. ನನ್ನನ್ನು ಹೊರತು ಪಡಿಸಿ ನಿಪಿ-1ಕ್ಕೆ ಸಾಕ್ಷಿಯಾಗಿ ಮಂಜು ಎಂಬುವವರು ಸಹಿ ಮಾಡಿರುತ್ತಾರೆ. ಪುಟ್ಟಸ್ವಾಮಿರವರು ಬಿಕ್ಲಂ ದಾರರಾಗಿ ಸಹಿ ಮಾಡಿರುತ್ತಾರೆ.

ನಿಪಿ-1ಕ್ಕೆ ನಾನು ಬಿಕ್ಲಂದಾರನಾಗಿ ಸಹಿ ಮಾಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು. ನನ್ನನ್ನು ಹೊರತು ಪಡಿಸಿ ಸಾಕ್ಷಿದಾರರಾಗಿ ನಾಗವೇಲು ಮತ್ತು ಜಡೇಸ್ವಾಮಿಯವರು ಸಹಿ ಮಾಡಿರುತ್ತಾರೆ.

**ಪಾಟೀ ಸವಾಲು – ಪ್ರತಿವಾದಿ ಪರ ವಕೀಲರಿಂದ**

**ಪ್ರತಿವಾದಿ ಏಕಪಕ್ಷೀಯವಾಗಿರುವುದರಿಂದ ಪಾಟೀ ಸವಾಲು ಇಲ್ಲಃ**
**ಪ್ರತಿವಾದಿ ಗೈರು ಹಾಜರು ಪ್ರತಿವಾದ ಪತ್ರ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ.**
**ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**
**ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.**
**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು

ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ಓ.ಎಸ್. ನಂ. / 2021** **ಪಿ ಡಬ್ಲ್ಯೂ – 1**

**ದಿನಾಂಕಃ 03.11.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ – ವಾದಿ ಪರ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

ದಿನಾಂಕಃ ರ ನೋಂದಾಯಿತ ಕ್ರಯ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ– ಎಂದು ಗುರುತಿಸಲಾಯಿತು.

ದಿನಾಂಕಃ ರ ನೋಂದಾಯಿತ ಕ್ರಯ ಪತ್ರದ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ– ಎಂದು ಗುರುತಿಸಲಾಯಿತು.

ಯಥಾ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ– ಎಂದು ಗುರುತಿಸಲಾಯಿತು.

ಸರ್ವೆ ನಂ. ಕೈ ಬರಹದ ಪಹಣಿಯ ಯಥಾ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ– ಎಂದು ಗುರುತಿಸಲಾಯಿತು.

ಸರ್ವೆ ನಂ. ಗಣಕೀಕೃತ ಪಹಣಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ– ಎಂದು ಗುರುತಿಸಲಾಯಿತು.

ಒಂದು ಮ್ಯುಟೇಷನ್ ರಿಜಿಸ್ಟರ್ ಎಕ್ಸ್ಟ್ರಾಕ್ಟನ್ನು ಹಾಜರು ಪಡಿಸಿದ್ದು ಅದನ್ನು ನಿಪಿ- ಎಂದು ಗುರುತಿಸಲಾಯಿತು.

ಒಂದು ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ಟ್ರಾಕ್ಟನ್ನು ಹಾಜರು ಪಡಿಸಿದ್ದು ಅದನ್ನು ನಿಪಿ- ಎಂದು ಗುರುತಿಸಲಾಯಿತು.

ಒಂದು ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ- ಎಂದು ಗುರುತಿಸಲಾಯಿತು.

ಒಂದು ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ- ಎಂದು ಗುರುತಿಸಲಾಯಿತು.

ಒಂದು ಕಂದಾಯ ರಶೀದಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ- ಎಂದು ಗುರುತಿಸಲಾಯಿತು.

ಪ್ರತಿವಾದಿಗಳಿಗೆ ಕಳುಹಿಸಿದ ನೋಟಿಸು ಹಿಂದಿರುಗಿ ಬಂದ ಅಂಚೆ ಕವರನ್ನು ಹಾಜರು ಪಡಿಸಿದ್ದು ಅದನ್ನು ಈ ದಿನ ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಿ ಕವರನ್ನು ನಿಪಿ-4 ಎಂದು, ಅದರೊಳಗಿರುವ ನೋಟಿಸನ್ನು ನಿಪಿ-4(ಎ) ಎಂದು, ಎಂದು ಗುರುತಿಸಲಾಯಿತು.

ದಿನಾಂಕಃ 19.11.2021 ರಂದು ವಾದಿ ಮತ್ತು ಪ್ರತಿವಾದಿಗಳ ನಡುವೆ ಆದ ಸ್ವಾಧೀನ ರಹಿತ ನೋಂದಾಯಿತ ಕ್ರಯದ ಒಪ್ಪಂದದ ಕರಾರು ಪತ್ರದ ಮೂಲ ಪ್ರತಿಯನ್ನು ಅದನ್ನು ನಿಪಿ-1 ಎಂದು, ವಾದಿಯ ಸಹಿಯನ್ನು ನಿಪಿ-1(ಎ) ರಿಂದ ನಿಪಿ-1(ಸಿ) ಗುರುತಿಸಲಾಯಿತು. 1ನೇ ಪ್ರತಿವಾದಿಯ ಸಹಿಯನ್ನು ನಿಪಿ-1(ಡಿ) ರಿಂದ ನಿಪಿ-1(ಎಫ್) ಎಂದು ಗುರುತಿಸಲಾಯಿತು. 2ನೇ ಪ್ರತಿವಾದಿಯ ಸಹಿಯನ್ನು ನಿಪಿ-1(ಜಿ) ರಿಂದ ನಿಪಿ-1(ಐ) ಎಂದು ಗುರುತಿಸಲಾಯಿತು.

ದಿನಾಂಕಃ 11.02.2023 ರಂದು ಪ್ರತಿವಾದಿಗಳಿಗೆ ಕಳುಹಿಸಿದ ನೋಟಿಸಿನ ಕಛೇರಿ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-2 ಎಂದು, ಆ ಬಗ್ಗೆ ನಾಲ್ಕು ಅಂಚೆ ರಶೀದಿಗಳನ್ನು ನಿಪಿ-2(ಎ) ರಿಂದ ನಿಪಿ-2(ಡಿ) ಎಂದು, ಮೂರು ಅಂಚೆ ಸ್ವೀಕೃತಿಗಳನ್ನು ನಿಪಿ-3 ರಿಂದ ನಿಪಿ-5 ಎಂದು ಗುರುತಿಸಲಾಯಿತು.

ನಿಪಿ-1ಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-1(ಎಫ್) ಎಂದು ಗುರುತಿಸಲಾಯಿತು. ನನ್ನನ್ನು ಹೊರತು ಪಡಿಸಿ ನಿಪಿ-1ಕ್ಕೆ ಸಾಕ್ಷಿಯಾಗಿ ಮಂಜು ಎಂಬುವವರು ಸಹಿ ಮಾಡಿರುತ್ತಾರೆ. ಪುಟ್ಟಸ್ವಾಮಿರವರು ಬಿಕ್ಲಂ ದಾರರಾಗಿ ಸಹಿ ಮಾಡಿರುತ್ತಾರೆ.

ನಿಪಿ-1ಕ್ಕೆ ನಾನು ಬಿಕ್ಲಂದಾರನಾಗಿ ಸಹಿ ಮಾಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು. ನನ್ನನ್ನು ಹೊರತು ಪಡಿಸಿ ಸಾಕ್ಷಿದಾರರಾಗಿ ನಾಗವೇಲು ಮತ್ತು ಜಡೇಸ್ವಾಮಿಯವರು ಸಹಿ ಮಾಡಿರುತ್ತಾರೆ.

**ಪಾಟೀ ಸವಾಲು – ಪ್ರತಿವಾದಿ ಪರ ವಕೀಲರಿಂದ**

**ಪ್ರತಿವಾದಿ ಏಕಪಕ್ಷೀಯವಾಗಿರುವುದರಿಂದ ಪಾಟೀ ಸವಾಲು ಇಲ್ಲಃ**
**ಪ್ರತಿವಾದಿ ಗೈರು ಹಾಜರು ಪ್ರತಿವಾದ ಪತ್ರ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ.**
**ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**
**ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.**
**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು

ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ಓ.ಎಸ್. ನಂ. 3 / 2020** 3 **ಪಿ ಡಬ್ಲ್ಯೂ – 1**

**ದಿನಾಂಕಃ 03.11.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ – ವಾದಿ ಪರ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆಯ ಹೆಚ್ಚುವರಿ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

**ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ದಿನಾಂಕಃ 03.11.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ – ವಾದಿ ಪರ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆಯ ಹೆಚ್ಚುವರಿ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

**ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು

ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ದಿನಾಂಕಃ** 03.11.2025 **ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – ವಾದಿ ಪರ ವಕೀಲರಿಂದ**

ಸಾಕ್ಷಿಗೆ ಕ್ರಿಮಿನಲ್ ಮೊಕದ್ದಮೆಯಲ್ಲಿ ನೀಡಿದ ಸಾಕ್ಷಿ ವಿಚಾರಣೆಯಾದ ನಿಡಿ–11ನ್ನು ನೋಡಿ ಗುರುತಿಸುತ್ತಾರೆ. ನಮ್ಮ ಬ್ಯಾಂಕಿನ ಅಕೌಂಟ್ ಎಕ್ಸ್ ಟ್ರಾಕ್ಟನ್ನು ಪಡೆದು ಹಾಜರು ಪಡಿಸಲು ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ತೆಗೆದುಕೊಳ್ಳಲು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಾನು ಕಬ್ಬು ಬೆಳೆ ಸಾಲದ ಬಗ್ಗೆ ಮಾತನಾಡಲು ಬ್ಯಾಂಕಿಗೆ ಹೋಗಿದ್ದೆ. ನನಗೆ 6 ಎಕರೆ ಜಮೀನು ಇದೆ. ಅದು ನೀರಾವರಿ ಜಮೀನು ಇರುತ್ತದೆ. ನನ್ನ ಬ್ಯಾಂಕಿನಲ್ಲಿ ಎರಡು ಮೂರು ಸಾವಿರ ಇದ್ದಿರಬಹುದು. ಬ್ಯಾಂಕಿನವರು ನೀಡಿದ ಚೆಕ್ ಬೌನ್ಸ್ ಆದ ಬಗ್ಗೆ ಹಿಂಬರವನ್ನು ನೀಡಲು ನನಗೆ ತೊಂದರೆ ಇರಲಿಲ್ಲ. ಸದರಿ ಬ್ಯಾಂಕಿನ ಹಿಂಬರಹದಲ್ಲಿ ನನ್ನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂದು ನಮೂದು ಮಾಡಿದ್ದಾರೆ ಸಹಿಯಲ್ಲಿ ವ್ಯತ್ಯಾಸವಿದೆಯೇ ಇಲ್ಲವೇ ಎನ್ನುವ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ನಾನು ಆ ಬಗ್ಗೆ ತಿಳಿದುಕೊಂಡಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ಸಹಿ ಇಲ್ಲದೇ ಇದ್ದರೂ ಹಿಂಬರಹದಲ್ಲಿ ಆ ಬಗ್ಗೆ ನಮೂದು ಮಾಡಿಲ್ಲ ಎಂದು ನಾನು ಬ್ಯಾಂಕ್ ಅಧಿಕಾರಿಗೆ ತಕರಾರು ನೀಡಿಲ್ಲ ಮತ್ತು ಯಾವುದೇ ಪೋಲಿಸ್ ದೂರು ನೀಡಿಲ್ಲ. ಸಹಿ ನನ್ನದಲ್ಲ ಎಂದು ಆ ಬಗ್ಗೆ ಚೆಕ್ಕನ್ನು ಬೆರಳು ತಜ್ಞರ ವರದಿಗೆ ಕಳುಹಿಸಲು ಕ್ರಮ ತೆಗೆದುಕೊಂಡಿರುವುದಿಲ್ಲ.

ಬ್ಯಾಂಕಿಗೆ ಹೋಗಿ ನನ್ನ ಚೆಕ್ಕು ಮಾನ್ಯವಾಗಿದೆ ಎಂದು ತಿಳಿದುಕೊಳ್ಳಲು ಪ್ರಯತ್ನ ಪಟ್ಟಿಲ್ಲ. ಸಾಕ್ಷಿಯು ನಾನು ಚೆಕ್ಕು ಕೊಟ್ಟಿಲ್ಲ ಚೆಕ್ಕು ಕಳೆದುಹೋಗಿದೆ ಎಂದು ಉತ್ತರಿಸುತ್ತಾರೆ. ನಾನು ಬೇರೆ ಪಾಸ್ ಪುಸ್ತಕ ತೆಗೆದುಕೊಂಡಿದ್ದೇನೆ ಚೆಕ್ಕು ಪುಸ್ತಕ ತೆಗೆದುಕೊಂಡಿಲ್ಲ. ಹೊಸ ಪಾಸ್

ಪುಸ್ತಕ ತೆಗೆದುಕೊಂಡ ಬಗ್ಗೆ ನ್ಯಾಯಾಲಯಕ್ಕೆ ಕೊಡಲು ತೊಂದರೆ ಇತ್ತ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿರಲಿಲ್ಲವೆಂದು ಉತ್ತರಿಸುತ್ತಾರೆ. ನಾನು ಒಟ್ಟು ಎಷ್ಟು ಚೆಕ್ಕುಗಳು ಮಾನ್ಯವಾಗಿದೆ ಎಂದು ತೋರಿಸಲು ಚೆಕ್ಕು ಪುಸ್ತಕ ಹಾಜರು ಪಡಿಸಲು ತೊಂದರೆ ಇರಲಿಲ್ಲ. ನಾನು 25 ಹಾಳೆಯಿರುವ



ಒಂದು ಚೆಕ್ ಪುಸ್ತಕವನ್ನು ಮಾತ್ರ ತೆಗೆದುಕೊಂಡಿದ್ದೇನೆ. ನಾನು ಬ್ಯಾಂಕಿಗೆ ತಕರಾರು ಕೊಟ್ಟಾಗ ಬೇರೆ ಏನು ದಾಖಲೆ ತೆಗೆದುಕೊಂಡಿಲ್ಲ. ನನ್ನ ಮಗನ ಚೆಕ್ ಪುಸ್ತಕ ಮತ್ತು ಪಾಸ್ ಪುಸ್ತಕ ಕಳೆದುಹೋದ ಬಗ್ಗೆ ಯಾವುದೇ ದಾಖಲೆ ಕೊಟ್ಟಿಲ್ಲ. ಪೋಲಿಸರಿಗೆ ಕೊಟ್ಟ ದೂರಿನ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿಲ್ಲ. ಠಾಣೆಯಲ್ಲಿ ಕೇಸು ನ್ಯಾಯಾದಲ್ಲಿರುವ ಕಾರಣ ನ್ಯಾಯಾಲಯದಲ್ಲಿ ನೋಡಿಕೊಳ್ಳಿ ಎಂದು ಹೇಳಿ ಆ ಬಗ್ಗೆ ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ. ವಾದಿಯವರ ಮೇಲೆ ಖಾಸಗಿ ಪಿರ್ಯಾದನ್ನು ಸಲ್ಲಿಸಲು ಪ್ರಯತ್ನ ಮಾಡಿಲ್ಲ.

**ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ದಿನಾಂಕಃ 03.11.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು – 1ನೇ ಪ್ರತಿವಾದಿ ಪರ ವಕೀಲರಿಂದ**

ನಿಪಿ–21 ವಿಲ್ ಬರೆದುಕೊಡಲು ಪಾಪತ್ತಿಯಮ್ಮಾಳ್ ರವರಿಗೆ ಯಾವುದೇ ಹಕ್ಕಿರಲಿಲ್ಲ ಎಂದರೆ ಸರಿಯಲ್ಲ. ನಿಪಿ–21 ರಲ್ಲಿರುವ ಸಹಿ ಪಾಪತ್ತಿಯಮ್ಮಾಳ್ ರವರದ್ದಲ್ಲ ಎಂದರೆ ಸರಿಯಲ್ಲ. ಪಾಪತ್ತಿಯಮ್ಮಾಳ್ ರವರ ಸಹಿಯನ್ನು ನಾವೇ ಫೋರ್ಜರಿ ಮಾಡಿ ನಿಪಿ–21 ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಿನಾಂಕಃ 10.04.2013 ರ ದಾನ ಪತ್ರದ ಬಗ್ಗೆ ಗೊತ್ತು. ಸದರಿ ದಾನ ಪತ್ರವನ್ನು ಮಗನಿಗೆ ಸಂಬಂಧಪಟ್ಟಂತೆ ಬರೆದಿದ್ದಾರೆ. ಕೊಳತ್ತೂರಿಗೆ ಸೇರಿದ ಮನೆಗೆ ಸಂಬಂಧಪಟ್ಟಂತೆ ಬರೆದಿರುತ್ತಾರೆ. ದಾನ ಪತ್ರದ ಮೂಲ ಪ್ರತಿ ನಟರಾಜುರವರ ಮನೆಯಲ್ಲಿದೆ. ನಾನು ಅವರ ಮನೆಗೆ ಹೋಗಿದ್ದ ಕಾರಣ ದಾನ ಪತ್ರ ಅವರ ಮನೆಯಲ್ಲಿರುತ್ತದೆ ಎಂದು ಗೊತ್ತಾಗಿರುತ್ತದೆ. ಸದರಿ ಮೂಲ ಪ್ರತಿಯನ್ನು 2013 ರಲ್ಲಿ ನೋಡಿದ್ದೇನೆ. ನಿಪಿ–21 ರಲ್ಲಿರುವ ಆಸ್ತಿಯನ್ನು ರಾಜಮ್ಮಾಳ್ ರವರು ವನಿತಾರವರಿಗೆ ವಿಲ್ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ವನಿತಾರವರಿಗೆ ಸದರಿ ಆಸ್ತಿಯ ಖಾತೆಯಾದ ನಂತರ ಸದರಿ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ರಾಜಮ್ಮಾಳ್ ರವರನ್ನು 2ನೇ ಪ್ರತಿವಾದಿ ವನಿತಾರವರು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ರಾಜಮ್ಮಾಳ್ ತೀರಿಕೊಂಡ ನಂತರ ಅವರ ಅಂತ್ಯಕ್ರಿಯೆಯನ್ನು ವನಿತಾರವರ ಮಗನೇ ಮಾಡಿದ್ದನು ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರರು ಯಾರು ಅಂತ್ಯಕ್ರಿಯೆಗೆ ಹೋಗಿಲ್ಲ ಎಂದರೆ ಸರಿ.

ರಾಮಾಪುರದ ನಾಡ ಕಛೇರಿಯಲ್ಲಿ ರಾಜಮ್ಮಾಳ್‌ರವರಿಗೆ ಆದ ಖಾತೆಯ ಬಗ್ಗೆ ತಕರಾರು ಸಲ್ಲಿಸಿರುವುದಿಲ್ಲ ಸಾಕ್ಷಿಯು ಎಸಿ ಕೋರ್ಟನಲ್ಲಿ ತಕರಾರು ಹಾಕಿದ್ದೇವೆಂದು ಉತ್ತರಿಸುತ್ತಾರೆ. ಎಸಿ ಕೋರ್ಟನಲ್ಲಿ ಹಾಕಿದ ಆರ್ ಎ 41/2014 ಮುಗಿದುಹೋಗಿರುತ್ತದೆ ಸದರಿ ಆರ್ ಎ ನಲ್ಲಿ ಮೇಲ್ಮನವಿ ಸಲ್ಲಿಸಿ ಎಂದು ಆದೇಶ ಮಾಡಿದ್ದಾರೆಂದು ಉತ್ತರಿಸುತ್ತಾರೆ. ಡಿಸಿ ಕೋರ್ಟನಲ್ಲಿ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಡಿಸಿ ಕೋರ್ಟನಲ್ಲಿ ಮೇಲ್ಮನವಿ ಸಲ್ಲಿಸಲು ತೊಂದರೆ ಇರುವುದಿಲ್ಲ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇವೆಂದು ಉತ್ತರಿಸುತ್ತಾರೆ. ಎಸಿ ಕೋರ್ಟನಲ್ಲಿ ಮತ್ತು ಈ ನ್ಯಾಯಾಲಯದಲ್ಲಿ ರಾಜಮ್ಮಾಳ್‌ರವರು ದಾಖಲೆಗಳನ್ನು ಸೃಷ್ಟಿ ಮಾಡಿದ್ದಾರೆಂದು ಬರೆಸಿದ್ದೇನೆ. ವಿಲ್ ನಾಮೆಯನ್ನು ಸೃಷ್ಟಿ ಮಾಡಿದ್ದಾರೆಂದು ಹೇಳಿದ್ದೇನೆ. ರಾಜಮ್ಮಾಳ್‌ರವರು ಯಾವ ಯಾವ ದಾಖಲೆಗಳನ್ನು ಸೃಷ್ಟಿ ಮಾಡಿದ್ದಾರೆಂದು ವಿವರವಾಗಿ ದಾವೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

ರಾಜಮ್ಮಾಳ್‌ರವರು ಗೋಕುಲಂ ಆಸ್ಪತ್ರೆ ಸೇಲಂ ರಲ್ಲಿ ದಿನಾಂಕಃ 16.11.2021 ಮೃತಪಟ್ಟಿದ್ದಾರೆ ಎಂದರೆ ಸರಿ. ಅವರಿಗೆ ವಾರಸುದಾರರು ಅವರ ತಂಗಿ ಮಗಳು ವನಿತಾ ಎಂದರೆ ಸರಿಯಲ್ಲ. ರಾಜಮ್ಮಾಳ್‌ರವರಿಗೆ ಮಕ್ಕಳಿರಲಿಲ್ಲ ಎಂದರೆ ಸರಿ. ರಾಜಮ್ಮಾಳ್‌ರವರಿಗೆ ವಾರಸುದಾರರು ಇಲ್ಲ. ರಾಜಮ್ಮಾಳ್‌ರವರ ಮೊದಲ ಸಹೋದರ ಸುಂದರವೇಲು ಎಂದರೆ ಸರಿ. ರಾಜಮ್ಮಾಳ್ ಮತ್ತು ಸುಂದರವೇಲು ರವರಿಗೆ ಒಂದೇ ದಿನ ಮದುವೆಯಾಯಿತು ಎಂದರೆ



ಇರಬಹುದು. ರಾಜಮ್ಮಾಳ್ ರವರ ಗಂಡನ ಹೆಸರು ಜಿ. ನಟರಾಜು, ಸುಂದರವೇಲು ರವರ ಹೆಂಡತಿ ಸರಸ್ವತಿ ಎಂದರೆ ಸರಿ. ಸದರಿಯವರ ಮದುವೆ ವಿ.ಎಲ್ ಅಂಗಪ್ಪ ಮೊದಲಿಯಾರ್ ರವರ ಕೊಳತ್ತೂರಿನ ಮನೆಯಲ್ಲಿ ಆಗಿದೆ ಎಂದರೆ ಸರಿ. ನನ್ನ ಸಹೋದರ ಈ ಕೇಸಿನಲ್ಲಿ 2ನೇ ವಾದಿ ಎಂದರೆ ಸರಿ. ಅವರ ಸಹಿಯನ್ನು ನೋಡಿದರೆ ಗುರುತು ಮಾಡಬಹುದು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಅದರಲ್ಲಿ ಜಿ. ಚಂದ್ರಶೇಖರ್ ರವರ ಸಹಿ ಇದೆ ಎಂದರೆ ಸರಿ. ಚಂದ್ರಶೇಖರನ್ ರವರು ರಾಜಮ್ಮಾಳ್ ಕೋಂ ನಟರಾಜು ರವರಿಗೆ ಪೋಲಿಸ್ ಠಾಣೆಯಲ್ಲಿ ಬರೆದುಕೊಟ್ಟ ದಾಖಲೆ ಎಂದರೆ ಸರಿ. ಅದನ್ನು ನಿಡಿ–1 ಎಂದು ಗುರುತಿಸಲಾಯಿತು. ಟ್ರಾನ್ಸ್ ಲೇಷನ್ ಪ್ರತಿಯನ್ನು ನಿಡಿ–1(ಎ) ಎಂದು ಗುರುತಿಸಲಾಯಿತು.

ನಿಪಿ–8ನ್ನು ರಾಜಮ್ಮಾಳ್ ರವರು ಬದುಕಿದ್ದ ಸಮಯದಲ್ಲಿ 2ನೇ ಪ್ರತಿವಾದಿಗೆ ಬರೆದಿದ್ದಾರೆ ಎಂದರೆ ಸರಿ. ದಾನ ಪತ್ರದ ಮೇಲೆ ವನಿತಾರವರಿಗೆ ಖಾತೆಯಾಗಿದೆ ಎಂದರೆ ಸರಿ. ವನಿತಾರವರ ಹೆಸರಿಗೆ ಖಾತೆಯಾದ ಬಗ್ಗೆ ರೆವಿನ್ಯೂ ನ್ಯಾಯಾಲಯದಲ್ಲಿ ಕೇಸು ಹಾಕಿರುವುದಿಲ್ಲ. 2ನೇ ಪ್ರತಿವಾದಿ ದಿನಾಂಕಃ 18.09.2020 ರಂದು ದಾವಾ ಆಸ್ತಿಯನ್ನು 5ನೇ ಪ್ರತಿವಾದಿಯವರಿಗೆ ಮಾರಾಟ ಮಾಡಿದ್ದಾರೆಂದರೆ ಸರಿ. ಆ ಕ್ರಯ ಪತ್ರದ ಆಧಾರದ ಮೇಲೆ 5ನೇ ಪ್ರತಿವಾದಿಗೆ ಖಾತೆಯಾಗಿದೆ ಎಂದರೆ ಸರಿ. ದಿನಾಂಕಃ 08.03.2022 ರಂದು 3ನೇ ಪ್ರತಿವಾದಿ 6 ಮತ್ತು 7ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಕ್ರಯ ಪತ್ರದ ಆಧಾರದ ಮೇಲೆ 6 ಮತ್ತು 7ನೇ ಪ್ರತಿವಾದಿಗಳಿಗೆ ಖಾತೆಯಾಗಿದೆ ಎಂದರೆ ಸರಿ. 3ನೇ ಪ್ರತಿವಾದಿ ದಾವಾ ಸ್ವತ್ತಿನ ಪೈಕಿ ಒಂದು ಸ್ವತ್ತನ್ನು 8ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. 8ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿ. ಈ ಎಲ್ಲಾ ಖಾತೆಗಳನ್ನು ಕಂದಾಯ ಇಲಾಖೆಯನ್ನು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ರಾಜಮ್ಮಾಳ್ ಪೌತಿಯಾದ್ದರಿಂದ ವನಿತಾರವರು ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದರು ನಂತರ ಕ್ರಯದಾರರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ.

4ನೇ ಪ್ರತಿವಾದಿ ನಟರಾಜುರವರ ತಂಗಿಯಾದ ಕಾರಣ ಪಕ್ಷಕಾರರನ್ನಾಗಿ ಮಾಡಿದ್ದೇನೆ. ಪಾಪತ್ತಿಯಮ್ಮಾಳ್, ರಾಜಮ್ಮಾಳ್ ಮತ್ತು ನಟರಾಜುರವರು ಒಂದೇ ಮನೆಯಲ್ಲಿದ್ದರು ಎಂದರೆ ಸರಿ. ರಾಜಮ್ಮಾಳ್ ರವರು ನಟರಾಜುರವರ ಧರ್ಮಪತ್ನಿ , ಪಾಪತ್ತಿಯಮ್ಮಾಳ್ ಪತ್ನಿಯಲ್ಲ ಎಂದರೆ ಸರಿಯಲ್ಲ. ಪಾಪತ್ತಿಯಮ್ಮಾಳ್ ರವರನ್ನು ನೋಡಿಕೊಳ್ಳಲು ಯಾರು ಇಲ್ಲದ ಕಾರಣ ರಾಜಮ್ಮಾಳ್ ಅವರ ಮನೆಯಲ್ಲಿದ್ದರು ಎಂದರೆ ಸರಿಯಲ್ಲ. ದಿನಾಂಕಃ 10.04.2013 ರಂದು

ಆಗಿರುವ ದಾನ ಪತ್ರದಲ್ಲಿ ಸಹಿ ಮಾಡಿರುವ ಸಾಕ್ಷಿದಾರರಾದ ಜಿ. ಚಂದ್ರಶೇಖರನ್ ಮತ್ತು ಜಿ. ಮಣಿವಣ್ಣನ್ ನನ್ನ ಸಹೋದರರು ಎಂದರೆ ಸರಿ. ಅವರುಗಳು ನಿಂತುಕೊಂಡು ವ್ಯವಹರಿಸಿ ದಾನ ಪತ್ರ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ದಾನ ಪತ್ರವನ್ನು ಪಾಪತ್ತಿಯಮ್ಮಾಳ್ ನಿಂತು ಬರೆಸಿದ್ದಾರೆ. ಸದರಿ ದಾನಪತ್ರದ ಬಗ್ಗೆ ನನಗೆ ಮಾಹಿತಿ ಇದೆ. ದಾನ ಪತ್ರದಲ್ಲಿ ನನ್ನ ಅಣ್ಣಂದಿರು ಪಾಪತ್ತಿಯಮ್ಮಾಳ್ ನಟರಾಜುರವರ ಹೆಂಡತಿ ಎಂದು ತಪ್ಪಾಗಿ ಬರೆಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು



ಮುಂದೆ ಬರೆಸಿಕೊಳ್ಳಬೇಕೆನ್ನುವ ಉದ್ದೇಶದಿಂದ ದಾನ ಪತ್ರದಲ್ಲಿ ಸುಳ್ಳು ಮಾಹಿತಿ ನೀಡಿ ಬರೆಸಿದ್ದಾರೆ ಎಂದರೆ ಸರಿಯಲ್ಲ. ಪಾಪತ್ತಿಯಮ್ಮಾಳ್ ರವರು ನಟರಾಜುರವರ ಹೆಂಡತಿಯಲ್ಲದ ಕಾರಣ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ಪಾಪತ್ತಿಯಮ್ಮಾಳ್ ರವರಿಗೆ ಯಾವುದೇ ಹಕ್ಕಿರದ ಕಾರಣ ಯಾವುದೇ ವಿಲ್ಲನ್ನು ಬರೆಯಲು ಹಕ್ಕಿಲ್ಲ ಎಂದರೆ ಸರಿಯಲ್ಲ. ಸದರಿ ವಿಲ್ ನಾಮೆ ಪೋರ್ಜರಿ ವಿಲ್ಲಾದ ಕಾರಣ ನಮಗೆ ಸದರಿ ಆಸ್ತಿಯಲ್ಲಿ ಹಕ್ಕಿಲ್ಲ ಎಂದರೆ ಸರಿಯಲ್ಲ. ರಾಜಮ್ಮಾಳ್ ವನಿತಾರವರಿಗೆ ಬರೆದುಕೊಟ್ಟ ದಾನ ಪತ್ರದಲ್ಲಿ 3 ರಿಂದ 8ನೇ ಪ್ರತಿವಾದಿಗಳಿಗೆ ಕಾನೂನುಬದ್ಧ ಹಕ್ಕಿದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ದಿನಾಂಕಃ 03.11.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಮುಂದುವರೆದ ಪಾಟೀ ಸವಾಲು – ವಾದಿ ಪರ ವಕೀಲರಿಂದ**

ನನ್ನ ತಂದೆ ತಾಯಿಗೆ ವಾದಿಯೊಬ್ಬಳೇ ಹೆಣ್ಣುಮಗಳು ಎಂದರೆ ಸರಿ. ದಾವಾ ಬಿ ಶೆಡ್ಯೂಲ್ ಚಿನ್ನ ಮತ್ತು ಬೆಳ್ಳಿ ಇರುತ್ತದೆ ಎಂದರೆ ಸರಿ. ನನ್ನ ತಾಯಿ ಜೀವಂತವಿರುವಾಗ ಬಿ ಶೆಡ್ಯೂಲ್ ಸ್ವತ್ತು ಮಗಳಿಗೆ ಸೇರಿಬೇಕು ಎಂದು ಹೇಳಿರುತ್ತಾರೆ ಎಂದರೆ ಎಲ್ಲರಿಗೂ ಸೇರಬೇಕು ಎಂದು ಉತ್ತರಿಸುತ್ತಾರೆ. ನನ್ನ ತಾಯಿ ಮೃತಪಟ್ಟ ನಂತರ ಸದರಿ ಬಿ ಶೆಡ್ಯೂಲ್ ನನ್ನ ಬಳಿ ಇತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಮ್ಮ ಪಿ. ವೆಂಕಟಸುಬ್ಬಯ್ಯ ನನ್ನ ತಾಯಿಯ ನೆನಪಿಗಾಗಿ ಸ್ವಲ್ಪ ದಿನ ತಾನು ಇಟ್ಟುಕೊಳ್ಳುತ್ತೇನೆಂದು ಹೇಳಿದ ಕಾರಣ ನಾನು ಆತನಿಗೆ ವಹಿಸಿಕೊಟ್ಟಿರುತ್ತೇನೆಂದು ಉತ್ತರಿಸುತ್ತಾರೆ. ನನ್ನ ತಮ್ಮ ಪಿ. ವೆಂಕಟಸುಬ್ಬಯ್ಯ ಕೂಡ ಈಗ ಮೃತಪಟ್ಟಿರುತ್ತಾರೆ ಎಂದರೆ ಸರಿ. ಈಗ ಬಿ ಶೆಡ್ಯೂಲ್ ಸ್ವತ್ತುಗಳು ನನ್ನ ತಮ್ಮನ ಹೆಂಡತಿಯ ಬಳಿ ಇರುತ್ತದೆ. ನನ್ನ ತಾಯಿ ನನ್ನ ಬಳಿ ಮತ್ತು ನನ್ನ ತಮ್ಮನ ಬಳಿ ಸದರಿ ಬಿ ಶೆಡ್ಯೂಲ್ ಸ್ವತ್ತು ವಾದಿಗೆ ಸೇರಬೇಕು ಎಂದು ಹೇಳುತ್ತಿದ್ದರು ಎಂದರೆ ಸರಿಯಲ್ಲ. ವಾದಿಗೆ ದಾವಾ ಸ್ವತ್ತಿನಲ್ಲಿ ಹಕ್ಕಿದೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ದಿನಾಂಕಃ 03.11.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು – ವಾದಿ ಪರ ವಕೀಲರಿಂದ**

ನಿಪಿ–2 ರಲ್ಲಿ ಸಾಕ್ಷಿಯಾಗಿ ಸಹಿ ಮಾಡಿರುವ ಮಲ್ಲಿಕಾರ್ಜುನರವರ ಸಹಿ ಇರುತ್ತದೆ ಎಂದರೆ ಸರಿ. ನಾವು 15 – 20 ವರ್ಷಗಳಿಂದ ಸ್ನೇಹಿತರು ಎಂದರೆ ಸರಿ. ನಾನು ಅವರ ಜೊತೆ ಇನ್ ಪೋಸಿಸ್ ನಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ಮೊದಲು ಸಲ್ಲಿಸಿದ ನನ್ನ ಲಿಖಿತ ಪ್ರತಿವಾದ ಪತ್ರದಲ್ಲಿ ಇನಾಂ ಎಂಬ ಪದವನ್ನು ಬಳಸಿಲ್ಲ ಎಂದರೆ ಸರಿ. ಅಪೀಲು ಸಲ್ಲಿಸಿದ ಸಮಯದಲ್ಲಿ ತಿದ್ದುಪಡಿಗೆ ಅರ್ಜಿ ಹಾಕಿ ಇನಾಂ ದಾಖಲೆಗಳನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿ. ತಿದ್ದುಪಡಿ ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಇನಾಂ ಜಮೀನಿನ ಬಗ್ಗೆ ಗೊತ್ತಿರುವ ಬಗ್ಗೆ ಭೂ ನ್ಯಾಯ ಮಂಡಳಿ ಮಾಡಿರುವ ಆದೇಶ ಇರುತ್ತದೆ. ಇನಾಂ ಜಮೀನಿನ ಬಗ್ಗೆ ಯಾರು ಕೇಳದ ಕಾರಣ ನನ್ನ ಪ್ರತಿವಾದ ಪತ್ರದಲ್ಲಿ ನಮೂದು ಮಾಡಿರುವುದಿಲ್ಲ. ದಿನಾಂಕಃ 18.04.2013 ರ ಹಿಂದೆ ತಹಶೀಲ್ದಾರರ ಮುಂದೆ ಕ್ರಯ ಮಾಡಲು ಅನುಮತಿ ಕೋರಿ ನಾನಾಗಲೀ ನನ್ನ ತಂದೆಯಾಗಲೀ ಅರ್ಜಿ ಸಲ್ಲಿಸಿರುವುದಿಲ್ಲ. ನಿಪಿ–1 ರಲ್ಲಿ ಇನಾಂ ಜಮೀನಿನ ಬಗ್ಗೆ ಮತ್ತು ಸರ್ಕಾರದಿಂದ ಅನುಮತಿ ಪಡೆದು ನಂತರ ಕ್ರಯ ಮಾಡಿಕೊಡುತ್ತೇವೆ ಎಂದು ನಮೂದಿಲ್ಲ ಎಂದರೆ ಸರಿ. ದಿನಾಂಕಃ 18.04.2013 ರ ಪೂರ್ವದಲ್ಲಿ ಅಥವಾ ನಂತರವಾಗಲೀ ವಾದಿಗೆ ದಾವಾ ಸ್ವತ್ತು ಇನಾಂ ಜಮೀನು ಎಂದು ತಿಳಿಸುವ ಬಗ್ಗೆ ದಾಖಲೆ ಇರುವುದಿಲ್ಲ ಬಾಯಿ ಮಾತಿನಲ್ಲಿ ಹೇಳಿರುತ್ತೇನೆ. ಬಾಯಿ ಮಾತಿನಲ್ಲಿ ವಾದಿಗೆ ತಿಳಿಸಿದ ಬಗ್ಗೆ ನನ್ನ ಪ್ರತಿವಾದ ಪತ್ರದಲ್ಲಿ ಬರೆದಿಲ್ಲ.

ನಿಪಿ–1 ರ 4ನೇ ಪುಟದಲ್ಲಿ ಅನುಸೂಚಿ ಕೆಳಗಡೆ 46.41 ಎಕರೆ ಪೈಕಿ 2 ಎಕರೆ 41 ಸೆಂಟನ್ನು ಬರೆದಿರುವ ಒಕ್ಕಣೆಗಳು ಯಾರ ಹಸ್ತಾಕ್ಷರ ಎಂದು ನನಗೆ ಗೊತ್ತಿಲ್ಲ ಆದರೆ ಸಹಿ ಮಾತ್ರ ನನ್ನ ತಂದೆಯದಿರುತ್ತದೆ. 5 ಲಕ್ಷ ಹಣವನ್ನು ನನಗೆ ಸಾಲವಾಗಿ ಕೊಟ್ಟಿದ್ದರು ಎಂದು ನನ್ನ ಪ್ರತಿವಾದ ಪತ್ರದಲ್ಲಿ ತಿಳಿಸಿಲ್ಲ ಆದರೆ ನಿಪಿ–1ನ್ನು ಮಾಡುವ ಪೂರ್ವದಲ್ಲಿ ಸಾಲವನ್ನು ತೆಗೆದುಕೊಂಡಿದ್ದೇನೆಂದು ಉತ್ತರಿಸುತ್ತಾರೆ. ಸಾಲ ಮರು ಪಾವತಿ ಮಾಡಲು ಎರಡು ವರ್ಷ ನಿಗಧಿ ಮಾಡಿದ್ದರೆಂದು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿದ್ದೇನೆ ಎಂದರೆ ಸರಿ. ಸಾಲ ಮರುಪಾವತಿ ಮಾಡದ ಬಗ್ಗೆ ವಾದಿಯಿಂದ ನಾನು ಯಾವುದೇ ನೋಟೀಸ್ ಪಡೆದುಕೊಂಡಿರುವುದಿಲ್ಲ. ಸಾಲದ ಮರುಪಾವತಿ ಬಗ್ಗೆ ನಾನು ಯಾವುದೇ ಕೇಸು ಹಾಕಿರುವುದಿಲ್ಲ. ನಿಪಿ–1 ಆದ ಆರು ತಿಂಗಳ ನಂತರ ನಿಪಿ–2 ಆಗಿರುತ್ತದೆ. ಅದು ಬಡ್ಡಿ ಮರುಪಾವತಿ ಬಗ್ಗೆ ಇರುತ್ತದೆ. ನಿಪಿ–2 ರಲ್ಲಿ ಯಾವುದೇ ಬಡ್ಡಿ ವಿಚಾರವಾಗಿ ನಮೂದಾಗಿಲ್ಲ ಎಂದರೆ ಸರಿ. ನಿಪಿ–3 ರಲ್ಲೂ ಕೂಡ ಸಾಕ್ಷಿಯಾಗಿ ಮಲ್ಲಿಕಾರ್ಜುನರವರ ಹೆಸರಿರುತ್ತದೆ ಎಂದರೆ ಸರಿ ಸಹಿ ಬಗ್ಗೆ ನನಗೆ ಗೊತ್ತಿಲ್ಲ.

ಮೊದಲನೇ ಪ್ರತಿವಾದ ಪತ್ರ ಸಲ್ಲಿಸುವ ಸಮಯದಲ್ಲಿ ವಾದಿಗಳು ಸಲ್ಲಿಸಿದ ಕೆಲವು ದಾಖಲಾತಿಗಳನ್ನು ಪಡೆದುಕೊಂಡಿರುತ್ತೇನೆ. ಎರಡನೇ ಪ್ರತಿವಾದ ಪತ್ರ ಸಲ್ಲಿಸುವ ಸಮಯದಲ್ಲಿ ವಾದಿಗಳು ಸಲ್ಲಿಸಿದ ಕೆಲವು ದಾಖಲಾತಿಗಳನ್ನು



ಪಡೆದುಕೊಂಡಿರುತ್ತೇನೆ. ತಿದ್ದುಪಡಿ ಪ್ರತಿವಾದ ಪತ್ರದಲ್ಲಿ ಮಲ್ಲಿಕಾರ್ಜುನ ಯಾರೆಂದು ಮತ್ತು ಅವರ ಸಹಿ ಗೊತ್ತಿಲ್ಲ ಎಂದು ಹೇಳಲು ತೊಂದರೆ ಇರಲಿಲ್ಲ. ಮಲ್ಲಿಕಾರ್ಜುನರವರ ಜೊತೆ ನಾನು ಕೆಲಸ ಮಾಡುತ್ತಿರುವ ಕಾರಣ ಅವರು ಹೇಗೆ ಸಹಿ ಮಾಡುತ್ತಾರೆಂದು ನನಗೆ ಗೊತ್ತು ಎಂದರೆ ಸರಿಯಲ್ಲ. ನನಗೆ ವಿಚಾರವೆಲ್ಲಾ ಗೊತ್ತಿದ್ದರೂ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ–2 ರ ಸ್ಟಾಂಪ್ ಪೇಪರನ್ನು 1ನೇ ಪ್ರತಿವಾದಿ ಖರೀದಿ ಮಾಡಿದ್ದಾರೆಂದು ನಮೂದಿದೆ ಎಂದರೆ ಸರಿ. ನಿಪಿ–3 ರ ಸ್ಟಾಂಪ್ ಪೇಪರನ್ನು ವಾದಿ ಖರೀದಿ ಮಾಡಿದ್ದಾರೆಂದು ನಮೂದಿದೆ ಎಂದರೆ ಸರಿ. ನನಗೆ ವಾದಿಯವರು ಮಲ್ಲಿಕಾರ್ಜುನರವರ ಮೂಲಕ ಪರಿಚಯವಾಗಿದ್ದರೆಂದು ನನಗೆ ಹೇಳಿದ್ದು ಅದಕ್ಕಿಂತ ಪೂರ್ವದಲ್ಲಿ ನನಗೆ ವಾದಿಯಾಗಲೀ ಅವರ ಮಗನಾಗಲೀ ಪರಿಚಯವಿರುವುದಿಲ್ಲ. ನಿಪಿ–2 ಮತ್ತು ನಿಪಿ–3 ರಲ್ಲಿ ನಿಪಿ–1 ರ ಬಗ್ಗೆ ನಮೂದಿದೆ ಎಂದರೆ ಸರಿ. ನಿಪಿ–1 ರಿಂದ ನಿಪಿ–3 ಸೃಷ್ಟಿ ಮಾಡಿದ ದಾಖಲೆ ಎಂದು ವಾದಿಯ ವಿರುದ್ಧ ಪೋಲಿಸ್ ಠಾಣೆಗೆ ದೂರು ಕೊಟ್ಟಿರುವುದಿಲ್ಲ. ತಿದ್ದುಪಡಿ ಲಿಖಿತ ಪ್ರತಿವಾದ ಪತ್ರವನ್ನು ಸಲ್ಲಿಸುವ ಪೂರ್ವದಲ್ಲಿ ನಿಪಿ–1 ಮತ್ತು ನಿಪಿ–2 ನ್ನು ಓದಿ ತಿಳಿದುಕೊಂಡಿದ್ದೇನೆ ನಿಪಿ–3ನ್ನು ಓದಿ ತಿಳಿದುಕೊಂಡಿರುವುದಿಲ್ಲ. ಪ್ರತಿವಾದ ಪತ್ರದಲ್ಲಿ ದಾವಾ ಸ್ವತ್ತಿಗೆ ಸಂಪೂರ್ಣ ಮಾಲೀಕರು ನಾವು ಎಂದು ಹೇಳಿದ್ದೇವೆ ಎಂದರೆ ಸರಿ. ಸಾಲ ಮರು ಪಾವತಿ ಮಾಡಲು ಹೋಗಿದ್ದ ಬಗ್ಗೆ ಯಾವುದೇ ಲಿಖಿತ ದಾಖಲೆಗಳು ಇರುವುದಿಲ್ಲ. ನಿಪಿ–1 ರಲ್ಲಿ ಇನಾಂ ಜಮೀನೆಂದು ನಮೂದು ಮಾಡಲು ನಮ್ಮ ಬಳಿ ದಾಖಲೆಗಳಿಲ್ಲದ ಕಾರಣ ನಮೂದು ಮಾಡಿಲ್ಲ ಎಂದು ಉತ್ತರಿಸುತ್ತಾರೆ.

ವಾದಿ ಕ್ರಯ ಪತ್ರ ಮಾಡಿಸಿಕೊಳ್ಳಲು ಸದಾ ಸಿದ್ಧರಿದ್ದರು ಎಂದು ವಾದ ಪತ್ರದಲ್ಲಿ ಹೇಳಿದ್ದಾರೆಂದರೆ ಸರಿ ಮತ್ತು ಉಳಿಕೆ ಹಣವಾದ 50 ಸಾವಿರ ಹಣವನ್ನು ಕೊಡಲು ಕೂಡ ಸಿದ್ಧರಿದ್ದಾರೆ ಎಂದು ಹೇಳಿದ್ದಾರೆಂದರೆ ಸರಿ. ಆ ಬಗ್ಗೆ ನಿಪಿ–9ನ್ನು ಸಲ್ಲಿಸಿದ್ದಾರೆಂದರೆ ಸರಿ. ನಾವು ವಾದಿಗೆ ಕ್ರಯ ಪತ್ರ ಬರೆಸಿಕೊಡಬೇಕಾಗುತ್ತದೆ ಎಂದು ಸಾಲದ ವಿಚಾರವಾಗಿ ನಿಪಿ–1 ರಿಂದ ನಿಪಿ–3ನ್ನು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ–1 ರಿಂದ ನಿಪಿ–3 ಕ್ರಯಕ್ಕೆ ಸಂಬಂಧಪಟ್ಟ ದಾಖಲೆಗಳು ಎಂದು ನನಗೆ ಗೊತ್ತಿದ್ದ ಕಾರಣ ನೋಟಿಸಿಗೆ ರಿಪ್ಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಎಲ್ ಎಲ್ ಬಿ ಓದುತ್ತಿದ್ದ ಕಾರಣ ಲೀಗಲ್ ನೋಟಿಸಿನ ಒಕ್ಕಣೆಗಳು ನನಗೆ ಗೊತ್ತಿತ್ತು ಎಂದರೆ ಸಾಕ್ಷಿಯು ನಾನು ಆ ಸಮಯದಲ್ಲಿ ಎಲ್ ಎಲ್ ಬಿ ಓದಿರಲಿಲ್ಲ ನಾನು ಎಂ ಎ ಇನ್ ಪಬ್ಲಿಕ್ ಅಡ್ಮಿನ್ನಿಸ್ಟ್ರೇಷನ್ ಓದಿದ್ದೇನೆ ಎಂದು ಉತ್ತರಿಸುತ್ತಾರೆ. ನಿಪಿ–4 ನೋಟಿಸ್ ಕನ್ನಡದಲ್ಲಿ ಇದೆ ಎಂದರೆ ಸರಿ. ನಿಪಿ–7(2) ರಲ್ಲಿ 1ನೇ ಪ್ರತಿವಾದಿಯ ಹೆಸರಿನಲ್ಲಿ 2 ಎಕರೆ 41 ಸೆಂಟ್ ಇದೆ ಎಂದು ನಮೂದಿದೆ ಎಂದರೆ ಸರಿ.

ಎಂ ಆರ್ ಟಿ 101/2014–15 ರಲ್ಲಿ ಮ್ಯೂಟೇಷನ್ ಆಗಿರುತ್ತದೆ ಎಂದರೆ ಸರಿ. ನಿಪಿ–7(1) ರಿಂದ ನಿಪಿ–7(12) ರಲ್ಲಿ ಎಲ್ಲೂ ಇನಾಂ ಜಮೀನು ಎಂದು ನಮೂದಾಗಿಲ್ಲ ಎಂದರೆ ಸರಿಯಲ್ಲ. ನಿಪಿ–8 ರಲ್ಲೂ ಕೂಡ ನಿಪಿ–1 ರ ಬಗ್ಗೆ ನಮೂದಿದೆ ಎಂದರೆ ಸರಿ. ವಾದಿಗೆ ಸಂಬಂಧಪಟ್ಟ ಎರಡು ಬ್ಯಾಂಕ್ ಪಾಸ್ ಪುಸ್ತಕಗಳನ್ನು ನಿಪಿ–9 ಮತ್ತು ನಿಪಿ–10 ರಂತೆ ಹಾಜರು ಪಡಿಸಿರುತ್ತಾರೆ ಎಂದರೆ ಸರಿ. ನಿಡಿ–1 ರಿಂದ ನಿಡಿ–6 ರಲ್ಲಿ ಎಲ್ಲೂ ಎಲ್ ಆರ್ ಎಫ್ ಬಗ್ಗೆ ನಮೂದಿಲ್ಲ ಎಂದರೆ ಸರಿ. ನಿಪಿ–1 ಮಾಡುವ ಸಮಯದಲ್ಲಿ ನಿಡಿ–1 ರಿಂದ ನಿಡಿ–6 ವಾದಿಗೆ ಕೊಡಲು ತೊಂದರೆ ಇರಲಿಲ್ಲ. ಸಾಕ್ಷಿಯು ವಾದಿ ಕೇಳಿಲ್ಲವೆಂದು ಉತ್ತರಿಸುತ್ತಾರೆ. ವಾದಿ ದಾಖಲಾತಿ ಕೇಳಿಲ್ಲವೆಂದು ಪ್ರಥಮ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿ. ನಿಡಿ–1 ರಿಂದ ನಿಡಿ–6ರ ನಕಲು ಪ್ರತಿಗಳನ್ನು 2018–20ನೇ ಸಾಲಿನಲ್ಲಿ ತೆಗೆದುಕೊಂಡಿದ್ದೇನೆ ಎಂದರೆ ಸರಿ. ಅದಕ್ಕಿಂತ ಪೂರ್ವದಲ್ಲಿ ಸದರಿ ದಾಖಲೆಗಳನ್ನು ಪಡೆದುಕೊಂಡಿದ್ದೀರಾ ಎಂಬ ಪ್ರಶ್ನೆಗೆ ಅವುಗಳು ಮನೆಯಲ್ಲಿವೆ ಎಂದು ಉತ್ತರಿಸುತ್ತಾರೆ. ಆ ರೀತಿ ಯಾವುದೇ ದಾಖಲೆಗಳನು ನನ್ನ ಬಳಿ ಇಲ್ಲ ಎಂದರೆ ಸರಿಯಲ್ಲ. ನಾನು ವಾದಿಗೆ ಕ್ರಯ ಪತ್ರಗಳನ್ನು ಬರೆದುಕೊಡಲು ಬದ್ಧನಿರುತ್ತೇನೆ ಎಂದರೆ ಸರಿಯಲ್ಲ. ನಾನು ತಹಶೀಲ್ದಾರರಿಂದ ಕ್ರಯ ಪತ್ರ ಮಾಡಲು ಅನುಮತಿ ಪಡೆಯುವ ಹೊಣೆಗಾರಿಕೆ ನನ್ನದು ಎಂದರೆ ಸರಿಯಲ್ಲ. ವಾದಿಗೆ ಕ್ರಯ ಪತ್ರ ಬರೆದುಕೊಡಬೇಕಾಗುತ್ತದೆ ಎಂದು ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ–1 ರಿಂದ ನಿಪಿ–3 ದಾವಾ ಸ್ವತ್ತಿಗೆ ಸಂಬಂಧಪಟ್ಟ ಕ್ರಯದ ಕರಾರು ಪತ್ರಗಳಾದ್ದರಿಂದ ನಾನು ವಾದಿಗೆ ಕ್ರಯ ಪತ್ರ ಬರೆದುಕೊಡಲು ಬಾಧ್ಯನಿರುತ್ತೇನೆ ಎಂದರೆ ಸರಿಯಲ್ಲ. ಈಗಲೂ ಕೂಡ ವಾದಿ ಕ್ರಯ ಪತ್ರ ಬರೆಸಿಕೊಳ್ಳಲು ತಯಾರಿದ್ದಾರೆ ನಾನು ಮತ್ತು ಇತರೆ ಪ್ರತಿವಾದಿಗಳು ಕ್ರಯ ಪತ್ರ ಬರೆದುಕೊಡದೇ ಸತಾಯಿಸುತ್ತಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು

ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ದಿನಾಂಕಃ 03.11.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – ವಾದಿ ಪರ ವಕೀಲರಿಂದ**

